ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	216
ಸದಸ್ಯರ ಹೆಸರು	ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	14.12.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT) ಗಳು ಅಸ್ತಿತ್ವದಲ್ಲಿ ಇವೆಯೇ: ಹಾಗಿದ್ದಲ್ಲಿ ಅವು ಯಾವುವು: ಇದರ ಸ್ಥಾಪನೆಯ ಉದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು)	ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ, 2015 ರ ಕಲಂ 9(ಬಿ) ರಂತೆ ಎಲ್ಲಾ ರಾಜ್ಯಗಳು ಜಿಲ್ಲಾ ಖನಿಜ ಪ್ರತಿಷ್ಠಾನ ಎಂಬ ಲಾಭರಹಿತ ಟ್ರಸ್ಟ್ ಸ್ಥಾಪಿಸಲು ಸೂಚಿಸಿರುತ್ತದೆ. ರಾಜ್ಯ ಸರ್ಕಾರವು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ (PMKKKY) ಅಂಶಗಳನ್ನು ಅಳವಡಿಸಿಕೊಂಡು, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016ನ್ನು ದಿನಾಂಕ 11.01.2016 ರಂದು ಜಾರಿಗೆ ತಂದಿದ್ದು, ನಂತರ ನಿಯಮಗಳಿಗೆ ದಿನಾಂಕ 25.07.2016, 08.03.2018 ಹಾಗೂ ದಿನಾಂಕ 06.05.2020 ರಂದು ತಿದ್ದುಪಡಿ ತರಲಾಗಿರುತ್ತದೆ. ಅದರಂತೆ ರಾಜ್ಯದ 30 ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸ್ಥಾಪಿಸಿದ್ದು, ಪ್ರಸ್ತುತ ಅಸ್ತಿತ್ವದಲ್ಲಿರುತ್ತವೆ. ಸದರಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗೆ ಸಂಗ್ರಹವಾಗುವ ಡಿಎಂಎಫ್ ನಿಧಿಯನ್ನು ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಬಳಸುವುದು ಟ್ರಸ್ಟ್ ನ ಮುಖ್ಯ ಉದ್ದೇಶವಾಗಿರುತ್ತದೆ.
ಆ)	ಸದರಿ ಟ್ರಸ್ಟ್ ಗಳ ಅಡಿ ಹಾಲಿ ಲಭ್ಯವಿರುವ ಅನುದಾನವೆಷ್ಟು: ಸದರಿ ಅನುದಾನವನ್ನು ಯಾವ ಮೂಲದಿಂದ ಶೇಖರಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು)	ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ 2015-16 ರಿಂದ ಅಕ್ಟೊಬರ್ 2021ರ ಅಂತ್ಯದವರೆಗೆ ರೂ. 2975.44 ಕೋಟಿಗಳು ಸಂಗ್ರಹವಾಗಿರುತ್ತದೆ. ಡಿಎಂಎಫ್ ಮೊತ್ತವನ್ನು ಗಣಿ ಮತ್ತು ಖನಿಜ (ತಿದ್ದುಪಡಿ) ಕಾಯ್ದೆ, 2015 ದಿನಾಂಕ 12.01.2015 ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ದಿನಾಂಕ 12.08.2016 ರನ್ವಯ ಕ್ರಮವಾಗಿ ಹರಾಜು ರಹಿತ ಮಂಜೂರು ಮಾಡಲಾದ ಗಣಿ / ಕಲ್ಲುಗಣಿ ಗುತ್ತಿಗೆದಾರಿಂದ

		ರಾಜಧನದ ಶೇ.30 ಹಾಗೂ ಹರಾಜು ಮೂಲಕ ಮಂಜೂರು ಮಾಡಲಾದ ಗಣಿ / ಕಲ್ಲು ಗಣಿ ಗುತ್ತಿಗೆದಾರಿಂದ ಶೇ.10 ರಷ್ಟು ನಿಧಿಯನ್ನು ಸಂಗ್ರಹಿಸಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-**1** ರಲ್ಲಿ ನೀಡಲಾಗಿದೆ.
ಇ)	ಈ ಅನುದಾನವನ್ನು ಯಾವ ಯಾವ ಕಾರ್ಯಗಳಿಗೆ ವಿನಿಯೋಗಿಸ ಲಾಗುವುದು: ಇದರ ಸಂಬಂಧ ಹಾಲಿ ಇರುವ ಮಾರ್ಗ ಸೂಚಿಗಳೇನು: ಇಲ್ಲಿಯವರೆಗೆ ಖರ್ಚಾಗದೇ ಉಳಿದಿರುವ ಅನುದಾನವೆಷ್ಟು: (ಜಿಲ್ಲಾವಾರು ವಿವರವಾಗಿ ಮಾಹಿತಿ ನೀಡುವುದು)	ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016 ರ ನಿಯಮ 18(2) ರಂತೆ ಡಿಎಂಎಫ್ ನಿಧಿಯಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ ಶೇ.10 ಎಂಡೋಮೆಂಟ್ ಗಾಗಿ, ಶೇ.5 ಆಡಳಿತಾತ್ಮಕ ವೆಚ್ಚಕ್ಕಾಗಿ ಹಾಗೂ ಉಳಿದ ಶೇ.85 ರಲ್ಲಿ 60:40 ಅನುಪಾತದಂತೆ ಗಣಿ ಬಾಧಿತ ಪ್ರದೇಶಗಳಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. **ಶೇಕಡ 60ರ ಅನುಪಾತದಲ್ಲಿ ಆಯೋಜಿಸುವ ಕಾರ್ಯಕ್ರಮಗಳು:** 1) ಕುಡಿಯುವ ನೀರು 2) ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಅಳತೆ 3) ಆರೋಗ್ಯ 4) ಶಿಕ್ಷಣ 5) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ 6) ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ 7) ಕೌಶಲ್ಯ ಅಭಿವೃದ್ಧಿ, 8) ನೈರ್ಮಲ್ಯತೆ **ಶೇಕಡ 40ರ ಅನುಪಾತದಲ್ಲಿ ಆಯೋಜಿಸುವ ಕಾರ್ಯಕ್ರಮಗಳು:** 1) ಭೌತಿಕ ಮೂಲಸೌಕರ್ಯ 2) ನೀರಾವರಿ 3) ಶಕ್ತಿ ಮತ್ತು ನೀರಿನ ಅಭಿವೃದ್ಧಿ 4) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಸಂಗ್ರಹಿಸಿದ ಹಾಗೂ ಉಳಿದಿರುವ ಮೊತ್ತದ ವಿವರಗಳನ್ನು ಅನುಬಂಧ **1** ರಲ್ಲಿ ನೀಡಲಾಗಿದೆ.

ಈ)	ತುಮಕೂರು ಜಿಲ್ಲೆಯ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT) ಅಡಿ ಎಷ್ಟು ಹಣ ಲಭ್ಯವಿದೆ: ಈಗಾಗಲೇ ಕಾಮಗಾರಿಗಳಿಗೆ ಖರ್ಚು ಮಾಡಿರುವ ಹಣವೆಷ್ಟು: ಬಾಕಿ ಇರುವ ಹಣವೆಷ್ಟು: (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)	ತುಮಕೂರು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಅಕ್ಟೋಬರ್ 2021 ರ ಅಂತ್ಯಕ್ಕೆ ಒಟ್ಟು ರೂ.35.19 ಕೋಟಿಗಳನ್ನು ಸಂಗ್ರಹಿಸಿದ್ದು, ರೂ. 49.95 ಕೋಟಿಗಳಿಗೆ ಕ್ರಿಯಾ ಯೋಜನೆ ತಯಾರಿಸಲಾಗಿದ್ದು, ವಿವಿಧ ಕಾಮಗಾರಿಗಳಿಗೆ ಒಟ್ಟು ರೂ. 22.95 ಕೋಟಿಗಳನ್ನು ವ್ಯಯಿಸಲಾಗಿರುತ್ತದೆ. **ತಾಲೂಕುವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.**
ಉ)	ಸದರಿ ಟ್ರಸ್ಟ್ ಯಡಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಕಾಮಗಾರಿಗಳಿಗೆ ಎಷ್ಟು ಹಣ ನಿಗದಿಗೊಳಿಸಲಾಗಿದೆ? (ವಿವರವಾದ ಮಾಹಿತಿ ನೀಡುವುದು)	ಭಾರತ ಸರ್ಕಾರದ ಗಣಿ ಮಂತ್ರಾಲಯದ ಆದೇಶ ದಿನಾಂಕ 23.04.2021 ರಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ತಿದ್ದುಪಡಿ) ನಿಯಮಗಳು, 2018ರ ನಿಯಮ 5 ರನ್ವಯ ಜಿಲ್ಲೆಯ ಮಾನ್ಯ ಸಂಸದರು, ಮಾನ್ಯ ವಿಧಾನ ಸಭಾ ಮತ್ತು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಟ್ರಸ್ಟಿಗಳಾಗಿರುತ್ತಾರೆ. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವನ್ನು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ (PMKKKY) ಮಾರ್ಗಸೂಚಿಯಂತೆ, ಪ್ರತ್ಯಕ್ಷ ಮತ್ತು ಪರೋಕ್ಷ ಗಣಿಬಾಧಿತ ಪ್ರದೇಶಗಳ ಹಾಗೂ ಜನರ ಕಲ್ಯಾಣ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸಮಿತಿಯ ಅನುಮೋದನೆಯಂತೆ ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. ಮುಂದುವರೆದು, ಮಾನ್ಯ ವಿಧಾನ ಸಭೆ ಮತ್ತು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಕಾಮಗಾರಿಗಳಿಗೆ ನಿರ್ದಿಷ್ಟ ಹಣವನ್ನು ನಿಗದಿಪಡಿಸಲು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಸಂಖ್ಯೆ ಸಿಐ 603 ಎಂಎಂಎನ್ 2021

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ-1

ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಸಂಗ್ರಹಿಸಿದ ಹಾಗೂ ಉಳಿದಿರುವ ಮೊತ್ತದ ವಿವರ

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆ	ಡಿಎಂಎಫ್ ಸಂಗ್ರಹಣೆ 2015-16 to ಅಕ್ಟೋಬರ್ 2021	85% ಡಿಎಂಎಫ್ ಮೊತ್ತ (ಎಂಡೋಮೆಂಟ್ ಮತ್ತು ಆಡಳಿತಾತ್ಮಕ ವೆಚ್ಚ ಹೊರತುಪಡಿಸಿ)	ಅನುಮೋದಿತ ಕ್ರಿಯಾ ಯೋಜನೆ ಮೊತ್ತ	ಖರ್ಚಾದ ಮೊತ್ತ	ಕೋವಿಡ್-19 ವೈರಾಣು ತಡೆಗಟ್ಟಲು ಖರ್ಚಾದ ಮೊತ್ತ	ಬಾಕಿ ಮೊತ್ತ
1	Ballari	177852.15	151174.33	222215.51	54373.22	4561.57	92239.54
2	Kalaburagi	39069.81	33209.34	54084.41	9297.11	5852.06	18060.17
3	Chitradurga	28529.62	24250.18	30639.65	11219.51	3182.38	9848.29
4	Bagalkot	8177.50	6950.88	11410.20	3764.66	386.40	2799.82
5	Koppal	5470.18	4649.65	8890.92	3681.63	543.00	425.02
6	Raichur	4321.90	3673.62	7023.41	2998.83	386.09	288.70
7	Chikkaballapura	4068.66	3458.36	7793.11	1123.87	383.40	1951.09
8	Ramanagara	3966.14	3371.22	2750.17	1928.97	527.18	915.07
9	Bangalore Urban	3703.21	3147.73	6354.13	1901.43	209.69	1036.61
10	Tumkur	3519.99	2991.99	4995.63	1839.42	456.41	696.16
11	Belgaum	2910.78	2474.16	1806.68	1614.09	287.58	572.49
12	Bangalore Rural	2879.48	2447.56	2385.14	65.63	262.78	2119.15
13	Chamarajanagar	2426.52	2062.54	2291.98	329.52	297.06	1435.96
14	Hassan	1368.24	1163.00	653.60	558.35	15.00	589.65
15	Uttara Kannada	1205.81	1024.94	761.65	680.99	44.00	299.95
16	Dakshina Kannada	969.09	823.73	165.50	126.49	152.00	545.24
17	Chikkamagaluru	940.47	799.40	665.24	487.62	0.00	311.78
18	Kolar	926.73	787.72	161.80	66.16	0.00	721.56
19	Udupi	916.46	778.99	450.03	428.85	119.28	230.86
20	Gadag	708.88	602.55	494.32	181.90	60.00	360.65
21	Dharwad	686.32	583.37	265.40	52.66	99.84	430.87
22	Haveri	599.19	509.31	788.03	169.60	93.71	246.00
23	Mandya	555.36	472.06	345.50	67.50	24.03	380.53
24	Davanagere	505.34	429.54	532.43	423.94	16.23	-10.63
25	Vijayapura	461.25	392.06	450.26	173.73	54.50	163.83
26	Shivamogga	239.41	203.50	56.95	28.38	39.45	135.67
27	Mysuru	199.63	169.69	177.19	9.44	22.86	137.39
28	Bidar	127.61	108.47	47.72	0.00	10.08	98.39
29	Kodagu	123.52	104.99	14.50	0.00	19.49	85.50
30	Yadgir	114.90	97.67	36.97	29.42	0.00	68.25
	Total	**297544.15**	**252912.53**	**368708.03**	**97622.92**	**18106.07**	**137183.54**

H.C.

ಉಪ ನಿರ್ದೇಶಕರು

ಉಪ ನಿರ್ದೇಶಕರು (ಸಂ ಮತ್ತು ಅ)

ಅನುಬಂಧ-2

ತುಮಕೂರು ಜಿಲ್ಲೆಯಲ್ಲಿ ತಾಲ್ಲೂಕುವಾರು ಸಂಗ್ರಹಿಸಿದ ಹಾಗೂ ಬಾಕಿ ಮೊತ್ತದ ವಿವರ

ರೂ.ಲಕ್ಷಗಳಲ್ಲಿ

ಜಿಲ್ಲೆ	ತಾಲ್ಲೂಕು	ಡಿ.ಎಂ.ಎಫ್ ಸಂಗ್ರಹಣೆ	85% ಡಿ.ಎಂ.ಎಫ್ ಮೊತ್ತ (ಎಂಡೋಮೆಂಟ್ ಮತ್ತು ಆಡಳಿತಾತ್ಮಕ ವೆಚ್ಚ ಹೊರತುಪಡಿಸಿ)	ಅನುಮೋದಿತ ಕ್ರಿಯಾಯೋಜನೆ ಮೊತ್ತ	ಖರ್ಚಾದ ಮೊತ್ತ	ಬಾಕಿ ಮೊತ್ತ
1	2	3	4	5	6	(4–6)
ತುಮಕೂರು	ಚಿಕ್ಕನಾಯಕನಹಳ್ಳಿ	68.15	57.93	393.00	137.27	696.15
	ಗುಬ್ಬಿ	3.05	2.59	367.78	111.56	
	ಕೊರಟಗೆರೆ	586.17	498.24	406.00	135.33	
	ಕುಣಿಗಲ್	1312.06	1115.25	368.33	139.32	
	ಮಧುಗಿರಿ	65.44	55.62	297.00	99.33	
	ಪಾವಗಡ	47.74	40.58	357.00	95.50	
	ಶಿರಾ	101.10	85.94	543.49	228.24	
	ತಿಪಟೂರು	57.12	48.55	370.20	118.83	
	ತುಮಕೂರು	1243.96	1057.37	1842.18	774.04	
	ತುರುವೇಕೆರೆ	35.20	29.92	50.65	0.00	
	ಒಟ್ಟು	**3519.99**	**2991.99**	**4995.63**	**1839.42**	
	Covid Exp.				456.42	
ಒಟ್ಟು ಮೊತ್ತ		**3519.99**	**2991.99**	**4995.63**	**2295.84**	

ಉಪ ನಿರ್ದೇಶಕರು (ತಂ ಮತ್ತು ಅ)
ಉಪ ನಿರ್ದೇಶಕರು
ಗಣಿ ಮತ್ತು ಭೂ ವಿಜ್ಞಾನ ಇಲಾಖೆ,
ನಂ.49, "ಖನಿಜಭವನ", ಬೆಂಗಳೂರು-01

CI 603 MMN 2021